ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ :ಉ.ಕೃ.ನಿ/ಕೃಭಾ/ ಸುತ್ತೋಲೆ-5/2014/-15

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ: 08-12-2014.

## ಸುತ್ತೋಲೆ-5

**ವಿಷಯ:** ಕೃಷಿ ಭಾಗ್ಯ ಯೋಜನೆಯಡಿ ಗಂಗಾ ಕಲ್ಯಾಣ ಯೋಜನೆಗೆ ಅನುಸರಿಸುವ ಕ್ರಮಗಳ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂ.ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22.07.2014.
2. ಈ ಕಛೇರಿಯ ಸುತ್ತೋಲೆಗಳ ಸಮ ಸಂಖ್ಯೆ ದಿನಾಂಕ 3-9-2014 27-09-2014 ಮತ್ತು 31-10-2014.

***

ಗಂಗಾ ಕಲ್ಯಾಣ ಯೋಜನೆಯಡಿ ಫಲಾನುಭವಿ ಆಯ್ಕೆಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದೆ.

1. ಕಳೆದ 5 ವರ್ಷಗಳಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳನ್ನು ಗಣನೆಗೆ ತೆಗೆದುಕೊಳ್ಳುವುದು.
2. ಪಂಪ್‌ಸೆಟ್ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ಗಂಗಾ ಕಲ್ಯಾಣ ಕಾರ್ಯಕ್ರಮದಡಿ ಕೊರೆಸಿರುವ ಸಫಲ ಕೊಳವೆ ಬಾವಿಗಳನ್ನು ಹೊಂದಿರುವ ಫಲಾನುಭವಿಗಳನ್ನು ಪರಿಗಣಿಸುವುದು.
3. ಕೃಷಿ ಭಾಗ್ಯ ಯೋಜನೆಯ ಘಟಕಗಳನ್ನು ಅನುಷ್ಠಾನಗೊಳಿಸಲು ಆಸಕ್ತಿಯಿರುವ ಬಗ್ಗೆ ದೃಡೀಕರಿಸಿ ಕೊಂಡು ಅಂತಹ ರೈತರನ್ನು ಮಾತ್ರ ಆಯ್ಕೆ ಮಾಡುವುದು.

ಮುಂದುವರೆದು ಕೃಷಿ ಭಾಗ್ಯ ಯೋಜನೆಯ ಸರ್ಕಾರಿ ಆದೇಶದಲ್ಲಿ ಸಣ್ಣ/ಅತಿಸಣ್ಣ ರೈತರಿಗೆ ಆಧ್ಯತೆ ನೀಡಬೇಕೆಂದು ತಿಳಿಸಲಾಗಿರುವುದರಿಂದ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುವ ರೈತರ ಸಮೀಕ್ಷೆ ಸಂಪೂರ್ಣವಾದ ನಂತರ ಇಲಾಖೆಗೆ ಸಲ್ಲಿಸಿರುವ ಎಲ್ಲಾ ಅರ್ಜಿಗಳಲ್ಲಿ ಸಣ್ಣ/ಅತಿಸಣ್ಣ ವರ್ಗದ ರೈತರಿಗೆ ಅರ್ಜಿಗಳನ್ನ ಪ್ರತ್ಯೇಕಿಸಿ ರೈತರ ಕ್ಷೇತ್ರ ಪರಿಶೀಲನೆ ಕೈಗೊಂಡು ಎಲ್ಲಾ ಅರ್ಹ ಸಣ್ಣ/ಅತಿಸಣ್ಣ ರೈತರನ್ನು ಹೆಚ್ಚುವರಿಯಾಗಿ ಆಯ್ಕೆ ಮಾಡಲು ತಿಳಿಸಲಾಗಿದೆ.

ಕೃಷಿ ಆಯುಕ್ತರು

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(23 ಜಿಲ್ಲೆಗಳು) ಇವರಿಗೆ ರವಾನಿಸುತ್ತಾ ಕೂಡಲೇ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದೆ.